SERVICE ABOVE SELF




Rotary

विश्वमित्रः

# ವಿಶ್ವಮಿತ್ರ

# VISHWAMITHRA

Weekly House Bulletin of Rotary Club Shimoga, R.I. Dist. 3182

UNITE FOR GOOD Rotary

Rtn. Francesco Arezzo
RI President 2025-26

| Rtn. K. Palaksha | Rtn. Anand R. | Rtn. Vishwas Y. | Rtn. M. Madhavachar |
|---|---|---|---|
| District Governor 2025-26 | President, Mob: 99800 93066 | Secretary, Mob : 99800 63180 | Bulletin Editor, Mob: 98862 73495 |

We meet every Wednesday at 6.45p.m. at Rotary Youth Centre, Sowlanga Road, L.B.S.Nagar, Shivamogga- 577 204

ಸಂಪುಟ – 68 ಸಂಚಿಕೆ –18 ದಿನಾಂಕ : 12–11–2025


## ದಿನಾಂಕ: 12.11.2025ರ ವಾರದ ಸಭೆ

**ದಿನಾಂಕ: 12.11.2025 ರಂದು ರೋಟರಿ ಸೆಂಟಿನರಿ ಫೌಂಡೇಷನ್‌ನ ವಾರ್ಷಿಕ ಸರ್ವಸದಸ್ಯರ ಸಭೆಯು ಸಂಜೆ 6.45 ಕ್ಕೆ ರೋಟರಿ ಸಭಾಂಗಣದಲ್ಲಿ ನಡೆಯಿತು. ಅಂದು ವೇದಿಕೆಯಲ್ಲಿ ರೋಟರಿ ಸೆಂಟಿನರಿ ಫೌಂಡೇಷನ್‌ನ ಚೇರ್‌ಮನ್ ಹಾಗೂ ಮಾಜಿ ಸಹಾಯಕ ಗವರ್ನರ್‌ರೊ.ಎನ್.ಎಸ್. ಶ್ರೀಧರ್ ಸಹಿತ ಹಾಲೀ ಸೆಂಟಿನರಿ ಫೌಂಡೇಷನ್‌ನ ಕಾರ್ಯದರ್ಶಿಗಳೂ ಹಾಗೂ ರೋಟರಿ ಅಧ್ಯಕ್ಷರಾದಂತಹ ರೊ.ಆರ್.ಆನಂದ್ ಮತ್ತು ಕಾರ್ಯದರ್ಶಿ ರೊ.ವಿಶ್ವಾಸ್ ಎಲಬುರ್ಗಿಯವರು ವೇದಿಕೆಯಲ್ಲಿದ್ದರು. ಸಾರ್ಜೆಂಟ್ ರೊ.ಎಸ್ ಮಂಜುನಾಥರವರು ಅಧ್ಯಕ್ಷರಿಗೆ ಕಾಲರ್ ತೊಡಿಸಿದ ನಂತರ ಕಲಾಪಗಳು ಆರಂಭವಾದವು.**













ರೊ.ಎನ್.ವಿ.ಭಟ್‌ರವರು "ನೀ ನಮ್ಮ ಗೆಲುವಾಗಿ ಬಾ" ಗೀತೆಯನ್ನು ಸುಶ್ರಾವ್ಯವಾಗಿ ಹಾಡಿ ಪ್ರಾರ್ಥನೆಯನ್ನು ಮಾಡಿದರು. ಮಾಜಿ ಅಧ್ಯಕ್ಷರಾದ ರೊ. ಹೆಚ್.ಎಸ್. ಮೋಹನ್‌ರವರು ಸರ್ವರನ್ನು ಸ್ವಾಗತಿಸಿದರು. ಕಾರ್ಯದರ್ಶಿ ರೊ.ವಿಶ್ವಾಸ್ ಎಲಬುರ್ಗಿಯವರು ಪ್ರಕಟಣೆ ಮಾಡಿದರು. ಹುಟ್ಟು ಹಬ್ಬ ಆಚರಿಸಿಕೊಂಡಿದ್ದ ರೊ. ಎಸ್. ಮಂಜುನಾಥರವರನ್ನು ವೇದಿಕೆಗೆ ಆಹ್ವಾನಿಸಿ ನೆನಪಿನ ಕಾಣಿಕೆ ನೀಡಲಾಯಿತು. ರೊ. ವೀರಣ್ಣ ಎ. ಹುಗ್ಗಿಯವರು ಪ್ರಕಟಣೆಯೊಂದನ್ನು ನೀಡಿದರು. ಇದೇ ಸಂದರ್ಭದಲ್ಲಿ ರೊ.ಆರ್.ಆನಂದರವರು ಮಾತನಾಡಿ, ನಮ್ಮ ಕ್ಲಬ್‌ನ ಮಾಜಿ ಅಧ್ಯಕ್ಷರಾದ ರೊ.ಡಿ.ಎಲ್. ಮಂಜುನಾಥರವರಿಗೆ ವಾಸವಿ ಎಕ್ಸಲೆನ್ಸ್ ಅವಾರ್ಡ್ ಬಂದಿರುವುದಾಗಿ ಪ್ರಕಟಿಸಿ ಅಭಿನಂದನೆ ತಿಳಿಸಿದರು. ಕೊನೆಯಲ್ಲಿ ಕಾರ್ಯದರ್ಶಿ ರೊ.ವಿಶ್ವಾಸ್ ಎಲಬುರ್ಗಿಯವರು ವಂದನಾರ್ಪಣೆ ಮಾಡಿದರು. ರೋಟರಿ ಸೆಂಟಿನರಿ ಫೌಂಡೇಷನ್‌ನ ವಾರ್ಷಿಕ ಸರ್ವ ಸದಸ್ಯರ ಸಭೆಗೆ ಅನುವು ಮಾಡಿಕೊಡಲು ಮೀಟಿಂಗ್‌ನ್ನು ಅಡ್ಜರ್ನ್ ಮಾಡಲಾಯಿತು.

### ಈ ವಾರದ ಸಭೆ

**ದಿನಾಂಕ: 18–11–2025, ಬುಧವಾರ ಸಂಜೆ 6:45 ಗಂಟೆಗೆ**

## ಕ್ಲಬ್ ಅಸೆಂಬ್ಲಿ

**ಅತಿಥಿ: ರೊ. ಕೆ.ಪಿ. ಶೆಟ್ಟಿ**

**ಅಸಿಸ್ಟೆಂಟ್ ಗವರ್ನರ್, ಝೋನ್ 10**

ದಯಮಾಡಿ ರೋಟರಿ ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ.

ಸ್ಥಳ: **ರೋಟರಿ ಯುವ ಕೇಂದ್ರ,** ಸವಳಂಗ ರಸ್ತೆ, ಶಿವಮೊಗ್ಗ

## ರೋಟರಿ ಬಂಧುಗಳು ಓದಲೇಬೇಕಾದ ಬರಹ

**ಇತ್ತೀಚೆಗೆ ದಿನಾಂಕ: 09.11.2025 ರಂದು ಶಿವಮೊಗ್ಗೆಯಲ್ಲಿ ಮಂಡಿ ಬ್ಯಾಂಕ್ ಸ್ಪೋರ್ಟ್ಸ್ ಕ್ಲಬ್‌ನ ಸಭಾಂಗಣದಲ್ಲಿ ನಡೆದ ರೋಟರಿ ಫೌಂಡೇಷನ್ ಸೆಮಿನಾರ್ (ಟಿ.ಆರ್.ಎಫ್) ಹಾಗೂ ಪೋಲಿಯೋ ಪ್ಲಸ್ ಸೆಮಿನಾರ್ "ಸಮೃದ್ಧಿ"ಬಗ್ಗೆ ವರದಿ ರೊ. ಎನ್.ವಿ.ಭಟ್‌ರವರಿಂದ**



ಶಿವಮೊಗ್ಗದಲ್ಲಿ ಕಳೆದ ವಾರ ರೋಟರಿ ಕ್ಲಬ್ ಶಿವಮೊಗ್ಗ ಪೂರ್ವ ಇವರ ನೇತೃತ್ವದಲ್ಲಿ ನೆಡೆದ ಸೆಮಿನಾರ್ ಹಲವಾರು ಕಾರಣಗಳಿಗೆ ಎಲ್ಲರ ಗಮನ ಸೆಳೆಯಿತು. ಮೊದಲನೆಯದಾಗಿ ಸೆಮಿನಾರ್‌ಗೆ ಆಯ್ಕೆ ಮಾಡಿದ ಸ್ಥಳ ಶಿವಮೊಗ್ಗ ಅರೆಕಾನಟ್ ಮಂಡಿ ಮರ್ಚೆಂಟ್ಸ್ ಸ್ಪೋರ್ಟ್ಸ್ ಕ್ಲಬ್ ಕಾರ್ಯಕ್ರಮಕ್ಕೆ ಹೇಳಿ ಮಾಡಿಸಿದಂತಿತ್ತು. ಶುಭಂ ಹೋಟೆಲಿನವರ ನೇತೃತ್ವದ ಊಟ ತಿಂಡಿ ವ್ಯವಸ್ಥೆ ತುಂಬಾ ಅಚ್ಚುಕಟ್ಟಾಗಿತ್ತು.

ಇನ್ನು ಸೆಮಿನಾರ್‌ನ ಮುಖ್ಯ ಅತಿಥಿಗಳಾಗಿ ತೆಲಂಗಾಣದಿಂದ ಆಗಮಿಸಿದ್ದ ರೊ.ಪಿಡಿಜಿ ಸಾಂಬಸಿವ ರಾವ್ ಹಾಗೂ ಉದ್ಘಾಟಕರಾಗಿ ಆಗಮಿಸಿದ್ದ ಎ.ಕೆ.ಎಸ್‌ಡಿಜಿಇ ರವಿಶಂಕರ್ ದಾಕೋಜುರವರು ಎಂದಿನಂತೆ ಪ್ರತ್ಯೇಕವಾಗಿ ಮಾತನಾಡದೇ ಸಂವಾದದ ಮೂಲಕ TRF ದೇಣಿಗೆಕುರಿತು ಮಾತನಾಡಿದರು. ಇನ್ನುಇವರಿಬ್ಬರ ಪರಿಚಯ ಮೊದಲು ಮಾಡಿಕೊಳ್ಳೋಣ.

AKS DGE ರವಿಶಂಕರ್ ದಾಕೋಜು ಬೆಂಗಳೂರು ರೋಟರಿ ಕ್ಲಬ್‌ನವರು ಇವರು ಮೂಲತಃ ರಿಯಲ್‌ಎಸ್ಟೇಟ್ ವ್ಯವಹಾರ ನಡೆಸುತ್ತಿದ್ದು, 2019 ರಲ್ಲಿ ರೋಟರಿಯ ಫೌಂಡೇಷನ್‌ಗಾಗಿ 100 ಕೋಟಿ ರೂಗಳನ್ನು ನೀಡುವುದಾಗಿ ವಾಗ್ದಾನ ಮಾಡಿದ್ದು ಈಗಾಗಲೇ 50 ಕೋಟಿ ರೂಗಳನ್ನು ನೀಡಿದ್ದಾರೆ. ಸಾಂಬಸಿವ ರಾವ್‌ರವರು ರೋಟರಿ ಜಿಲ್ಲೆ 3150 ರ ಹಿಂದಿನ ಗವರ್ನರ್ ಆಗಿರುತ್ತಾರೆ. ಇವರಿಬ್ಬರ ಸಂಭಾಷಣೆ ಸರಿ ಸುಮಾರು ಹೀಗೆ ಸಾಗಿತ್ತು.

**ಸಾಂಬಸಿವ ರಾವ್** : ರವಿಶಂಕರ್‌ರವರೇ ನಿಮ್ಮ ಕುಟುಂಬದ ಹಿನ್ನೆಲೆ ನಿಮ್ಮ ವ್ಯವಹಾರದ ಹಿನ್ನೆಲೆ ತಿಳಿಸುತ್ತೀರಾ?

**ರವಿಶಂಕರ್** : ಏಳು ಜನ ಅಣ್ಣ ತಮ್ಮಂದಿರಿರುವ ನಮ್ಮದು ಶ್ರೀಮಂತ ಕುಟುಂಬವೇನಲ್ಲ. ನನ್ನ ತಂದೆ ಸಾಯುವಾಗ ನನಗೆ 10 ವರ್ಷ. ನಾನು ಹುಟ್ಟುವಾಗ ಬಂಗಾರದ ಚಮಚ ಹೋಗಲಿ. ಪ್ಲಾಸ್ಟಿಕ್ ಚಮಚವೂ ಇರಲಿಲ್ಲ. ಎಲ್ಲವನ್ನೂ ದೇವರ ಕೃಪೆಯಿಂದ ಸ್ವಂತ ಗಳಿಸಿ, ಅದರಲ್ಲಿ ದೇಣಿಗೆ ನೀಡುತ್ತಿದ್ದೇನೆ. ನಾನು 100 ಕೋಟಿ ದೇಣಿಗೆ ನೀಡುವೆನೆಂದು ಭರವಸೆ ನೀಡಿದ್ದಾಗ ನನ್ನ ವಹಿವಾಟು ವಾರ್ಷಿಕ 70–80 ಕೋಟಿ. ನಂತರ ಕೋವಿಡ್‌ನಿಂದ ವ್ಯವಹಾರದಲ್ಲಿ ನಿರೀಕ್ಷಿತ ಗಳಿಕೆಯಾಗಲಿಲ್ಲ. ಆದರೂ ಕೊಟ್ಟ ಮಾತಿಗೆ ತಪ್ಪಿಲ್ಲ. ರೋಟರಿಗೆ ದೇಣಿಗೆ ನೀಡುತ್ತಾ ಬಂದಿದ್ದೇನೆ.

**ಸಾಂಬಸಿವ ರಾವ್** : ಅಲ್ಲ ಈ ದುಡ್ಡನ್ನೋ ಸರ್ಕಾರಕ್ಕೋ ಇಲ್ಲಾ ಯಾವುದಾದರು ಪಾರ್ಟಿಗೆ ಕೊಟ್ಟು ಇನ್ನೂ ಹೆಚ್ಚು ಪ್ರಸಿದ್ಧಿಯಾಗ ಬಹುದಿತ್ತಲ್ಲಾ?

**ರವಿಶಂಕರ್** : ಸ್ವಾಮಿ, ನಾನು ಈ ಸಮಾಜದಿಂದ ಪಡೆದಿದ್ದನ್ನು ಈ ಸಮಾಜಕ್ಕೆ ಪ್ರಾಮಾಣಿಕವಾಗಿ ಹಿಂತಿರುಗಿಸಬೇಕು. ಈ ಕೆಲಸ ರೋಟರಿಯಿಂದ ಮಾತ್ರ ಸಾಧ್ಯ. ಅಲ್ಲದೇ ನಾನು ನೀಡಿದ ಹಣ ಮತ್ತೆ ನನಗೆ ವಾಪಾಸ್ಸು ಬರುವುದರಿಂದ ನಿರಂತರವಾಗಿ ಸಮಾಜದ ಋಣ ತೀರಿಸಲು ಸಾಧ್ಯ.

**ಸಾಂಬಸಿವ ರಾವ್** : ಈ ದೇಣಿಗೆ ನೀಡುವಾಗ ನಿಮ್ಮ ಹೆಂಡತಿ ಮಕ್ಕಳ ಅಭಿಪ್ರಾಯ ಹೇಗಿತ್ತು. ?

**ರವಿಶಂಕರ್** : ನನ್ನ ಹೆಂಡತಿ ಒಪ್ಪಿಗೆ ಮೊದಲಿನಿಂದಲೂ ಇತ್ತು. ಇಂದಿಗೂ ಅವಳಿಗೆ ನಿಜವಾದ ಬಂಗಾರ ಹಾಗೂ ರೋಲ್ಡ್‌ಗೋಲ್ಡ್ ಬಂಗಾರದ ವ್ಯತ್ಯಾಸ ಗೊತ್ತಿಲ್ಲ. ಇನ್ನು ಮಕ್ಕಳಾದ ಏಕತಾ ಮತ್ತು ಸಮತಾ. ಇವರಲ್ಲಿ ಏಕತಾ ಒಂದು ದಿನ ಸಿಟ್ಟುಗೊಂಡಿದ್ದಳು. ಮರುದಿನ ಕಾರಣ ಕೇಳಿದಾಗ ಪಪ್ಪ ನೀವು ಕೊಟ್ಟ ದೇಣಿಗೆಗೆ ಇಷ್ಟು ಪ್ರಚಾರ ಬೇಕಿತ್ತಾ ? ಎಂದು ಮರು ಪ್ರಶ್ನಿಸಿದಾಗ ನಾನೇ ತಬ್ಬಿಬ್ಬಾಗಿದ್ದೆ.

**ಸಾಂಬಸಿವ ರಾವ್** : ನಿಮ್ಮ ಮುಂದಿನ ಕನಸಿನ ಕುರಿತು ವಿವರಿಸುವಿರಾ?

**ರವಿಶಂಕರ್** : ನಾನೊಂದು ಗಡಿಯಿಲ್ಲದ ಪ್ರಪಂಚದ ಕನಸು ಕಾಣುತ್ತಿದ್ದೇನೆ. ಇಡೀ ಪ್ರಪಂಚಕ್ಕೆ ಒಂದು ಸರ್ಕಾರ. ಬೇಕಾದರೆ ಒಂದೊಂದು ಕಾಂಟಿನೆಂಟ್‌ಗೆ ಒಂದೊಂದು ಸರ್ಕಾರ. ಅಲ್ಲಿ ಎಲ್ಲರೂ ಒಂದೇ. ಯಾವುದೇ ಗಡಿಯಿಲ್ಲದೇ ಯುದ್ಧಗಳೇ ಇಲ್ಲದೇ, ಪ್ರತೀದೇಶವೂ ಒಂದೊಂದು ರಾಜ್ಯವಾಗಬೇಕು. ಮತ್ತೆ ನನಗೆ ರೋಟರಿಯಲ್ಲಿ ಯಾವುದೇ ಹುದ್ದೇ ಬೇಡ. ಮುಂದಿನ ವರ್ಷದ ಗವರ್ನರ್ ಹುದ್ದೆಗೆ ನನ್ನನ್ನು ಒಪ್ಪಿಸಿದ್ದಾರೆ. ನನಗೆ ವಿಶ್ವದ ತುಂಬಾ ಗಿಡ ನೆಡುವ ಕನಸಿದೆ. ಈ ವರ್ಷ ಶ್ರೀಲಂಕಾಕ್ಕೂ ಹೋಗಿ ಗಿಡ ನೆಟ್ಟು ಬಂದೆ. ಇನ್ನುಎಲ್ಲಾ ಮಹಿಳೆಯರಿಗೂ ನನ್ನದೊಂದು ಪ್ರಾರ್ಥನೆ ಇದೆ. ನಿಮ್ಮ ಗಂಡ ಒಂದು ವೇಳೆ ಗಂಡನಾಗಿ, ಮಗನಾಗಿ, ತಂದೆಯಾಗಿ ಎಲ್ಲಾ ಕೆಲಸಗಳನ್ನು ಅಚ್ಚುಕಟ್ಟಾಗಿ ನೆರವೇರಿಸಿದ್ದರೆ, ಅವರು ದುಡಿದ ಹಣದಲ್ಲಿ ಅವರ ಇಷ್ಟದಂತೆ ದೇಣಿಗೆ ನೀಡಲು ಸಹಕರಿಸಿ. ನಾನು 2,50,000.00ಡಾಲರ್ ರೋಟರಿಗೆ ದೇಣಿಗೆ ನೀಡಿ ಆರ್ಚ್ ಕ್ಲಂಪ್ ಸೊಸೈಟಿ ಸದಸ್ಯನಾಗಲು ನನ್ನ ಪತ್ನಿಯೇ ಮೊದಲ ಪ್ರೇರಣೆ.

ಇನ್ನು ಕಾಫಿಡೇ ಸಿದ್ಧಾರ್ಥರವರು ಕಾಫಿಡೇ ಮೂಲಕ ಈ ನಾಡಿಗೆ ಕೀರ್ತಿ ತಂದಿದ್ದು ರಾಜ್ಯ ಸರ್ಕಾರವಾಗಲಿ, ಕೇಂದ್ರ ಸರ್ಕಾರವಾಗಲಿ, ಗಮನಿಸಿಲ್ಲ ಎಂದು ಹೇಳುತ್ತಾ ಭಾವುಕರಾದರು.

ಭಾನುವಾರ ಬೆಳಿಗ್ಗೆ The Joy of giving ಕುರಿತು ದೂರದ ಗೋವಾದಿಂದ ಬಂದಿದ್ದ AKS PDG ಆಡಿ. Vinaykumar ರವರೂ ಎಲ್ಲರನ್ನೂ ನಗಿಸುತ್ತಾ ಕಾರ್ಯಕ್ರಮಕ್ಕೆ ಮೆರುಗು ತಂದರು. ಪ್ರತೀಕ್ಷಣಕ್ಕೂ ನಾನು ನೀಡಿದ ಎಲ್ಲಾ ದೇಣಿಗೆಗಳಿಗೂ ನನ್ನ ಪತ್ನಿಯೇ ಪ್ರೇರಣೆ ಎಂದರು. ಇವರೂ ಸಹ ಆಸ್ಪತ್ರೆ ನಿರ್ಮಿಸಿ ಸಾಲದಲ್ಲಿರುವಾಗಲೇ ರೋಟರಿಗೆ ದೇಣಿಗೆ ನೀಡುತ್ತಾ ಬಂದಿದ್ದು, ಅದಕ್ಕೆ ದೇವರ ಸಹಾಯ ಹೇಗೆ ಕೂಡಿ ಬಂದಿತು ಎಂಬುದನ್ನು ವಿವರಿಸಿದರು. ಹಣಕೊಡಬೇಕೆಂದು ನಿಶ್ಚಯಿಸಿ ಹಣಕ್ಕೆ ಏನು ಮಾಡಬೇಕೆಂದು ಗೊತ್ತಾಗದೇ ಇದ್ದಾಗ ಎಲ್.ಐ.ಸಿ. ಹಣ ಬಂದಿದ್ದು, ಇನ್ನೊಮ್ಮೆ 2,50,000.00 ಡಾಲರ್ ನೀಡಲು ಒಪ್ಪಿದಾಗ ಅವರ ಅಪ್ಪನ ಕಾಲದಲ್ಲಿ ಹಾಕಿಟ್ಟಿದ್ದ ಷೇರಿನ ಹಣ ಒದಗಿ ಬಂದದ್ದನ್ನು ಸವಿವರವಾಗಿ ಹಾಸ್ಯದೊಂದಿಗೆ ವಿವರಿಸಿದಾಗ ಕೇಳುತ್ತಿದ್ದ ರೋಟರಿ ಸದಸ್ಯರು ಮಂತ್ರ ಮುಗ್ಧರಾದರು.

ಇನ್ನು Social Corporate Responsibility ಅಥವಾ ಕಂಪನಿಗಳ ಸಾಮಾಜಿಕ ಹೊಣೆಗಾರಿಕೆ ಕುರಿತು ರೊ.ಕಾಶಿನಾಥ ಪ್ರಭುರವರು ಸವಿವರವಾಗಿ ತಿಳಿಸಿದರು. ಇನ್ನು ಮುಂದಿನ ವರ್ಷಗಳಲ್ಲಿ CSR ಮೂಲಕವೇ ರೋಟರಿಯ ಬಹಳಷ್ಟು ಸೇವಾ ಕಾರ್ಯಗಳನ್ನು ನಿರ್ವಹಿಸಬಹುದೆಂದು ಅಂಕಿ ಅಂಶಗಳ ಸಹಿತ ವಿವರಿಸಿದರು. TRF ದೇಣಿಗೆ ನೀಡಿದ ರೋಟರಿಯ ಸದಸ್ಯರುಗಳನ್ನು ಸನ್ಮಾನಿಸಲಾಯಿತು.

ನಂತರ ಪಲ್ಸ್ ಪೋಲಿಯೋ ಕುರಿತು ರೊ.ಪಿಡಿಜಿ. ಡಾ.ಪಿ.ನಾರಾಯಣ ರವರ ನೇತೃತ್ವದಲ್ಲಿ ನಡೆದ ಸಂವಾದ ಕಾರ್ಯಕ್ರಮ ಅಚ್ಚುಕಟ್ಟಾಗಿ ನೆರವೇರಿತು. ಇಡೀ ವಿಶ್ವದಲ್ಲಿ ಪಾಕಿಸ್ಥಾನದಲ್ಲಿ 30 ಹಾಗೂ ಅಫಘಾನಿಸ್ಥಾನದಲ್ಲಿ 9 ಕೇಸುಗಳು ಕಂಡು ಬಂದಿದ್ದು ಸಂಪೂರ್ಣ ನಿರ್ಮೂಲನೆ ಮಾಡದೇ ಪೋಲಿಯೋ ಕಾರ್ಯಕ್ರಮ ನಿಲ್ಲುವುದಿಲ್ಲ ಎಂದರು.

ಒಟ್ಟಿನಲ್ಲಿ ಗವರ್ನರ್ ಪಾಲಾಕ್ಷಿ ಟೀಂ ಅಡಿಯಲ್ಲಿ ಒಂದು ಅತ್ಯುತ್ತಮ ಸೆಮಿನಾರ್ ನಡೆಯಿತು. ಪ್ರತೀವರ್ಷವೂ ಅದೇ ಸೆಮಿನಾರ್ ಅದೇ ವಿಷಯ ಎಂದು ಅಂದುಕೊಳ್ಳುವವರಿಗೆ ಈ ಸೆಮಿನಾರ್ ಬೇರೆಯದೇ ಉತ್ತರ ನೀಡಿದೆ ಎಂದರೆ ತಪ್ಪಾಗಲಾರದು. ಸೆಮಿನಾರ್ ಯಶಸ್ಸಿಗೆ ಶ್ರಮಿಸಿದ ಎಲ್ಲಾ ರೋಟರಿ ಮಿತ್ರರಿಗೂ ಮತ್ತೊಮ್ಮೆ ಧನ್ಯವಾದಗಳು


## ಅಭಿನಂದನೆಗಳು

**ನಮ್ಮ ಕ್ಲಬ್‌ನ ಮಾಜಿ ಅಧ್ಯಕ್ಷರೂ ಹಾಗೂ ಶರಣ್ಯ ಉಲ್ಬಣಿಸಿದ ರೋಗಿಗಳ ಆರೈಕೆ ಕೇಂದ್ರದ ಕಾರ್ಯದರ್ಶಿಗಳೂ ಆಗಿರುವ ರೊ.ಡಿ.ಎಲ್. ಮಂಜುನಾಥರವರಿಗೆ "ವಾಸವಿ ಎಕ್ಸಲೆನ್ಸ್" ಅವಾರ್ಡ್ ಪ್ರದಾನವಾಗಿರುತ್ತದೆ.**

**ಹಾಗೂ**

**ನಮ್ಮ ಕ್ಲಬ್‌ನ ಮಾಜಿ ಅಧ್ಯಕ್ಷರೂ ಹಾಗೂ ಚೇಂಬರ್ ಆಫ್ ಕಾಮರ್ಸ್‌ನ ನಿರ್ದೇಶಕರಾದ ರೊ. ಡಾ. ಲಕ್ಷ್ಮೀದೇವಿ ಗೋಪಿನಾಥರವರು FKCCI ವತಿಯಿಂದ ಕೊಡ ಮಾಡುವ 'ಮಹಿಳಾ ಉದ್ಯಮ ಪ್ರಶಸ್ತಿ – 2025' ಇದರ Out Standing Achievements and Leadership Award ಗೆ ಭಾಜನರಾಗಿದ್ದಾರೆ.**

**ಇವರುಗಳಿಗೆ ರೋಟರಿ ಕ್ಲಬ್ ಶಿವಮೊಗ್ಗ ವತಿಯಿಂದ ಅಭಿನಂದನೆಗಳು.**




## ಮುಖದ ಮೇಲಿನ ಕೂದಲುಗಳನ್ನು ಕಡಿಮೆ ಮಾಡಲು ಮನೆಮದ್ದು

**ರೊ. ಡಾ. ಕಾಂಚನ್ ಕುಲಕರ್ಣಿ,** ಬಿ.ಎ.ಎಂ.ಎಸ್. ಎಂ.ಡಿ. ಪಿಜಿಡಿಸಿಸಿಟಿ
**ಪಂಚಮಿ ಆಯುರ್ವೇದ ಚಿಕಿತ್ಸಾ ಕೇಂದ್ರ, ಕುವೆಂಪು ರಸ್ತೆ, ಶಿವಮೊಗ್ಗ**

- **ಹಳದಿ ಮತ್ತು ಹಾಲು ಪೇಸ್ಟ್** : ಒಂದು ಚಮಚ ಹಳದಿಯನ್ನು ಸ್ವಲ್ಪ ಹಾಲಿನಲ್ಲಿ ಮಿಶ್ರಣ ಮಡಿ ಪೇಸ್ಟ್ ಮಾಡಿ, ಅದನ್ನು ಮುಖಕ್ಕೆ ಹಚ್ಚಿ ಒಣಗಿದ ನಂತರ ನೀರಿನಿಂದ ತೊಳೆದುಕೊಳ್ಳಿ. ದಿನವೂ ಮಾಡಿದರೆ ಕೂದಲು ಬೆಳೆಯುವ ಪ್ರಮಾಣ ಕಡಿಮೆಯಾಗುತ್ತದೆ.
- **ಬೆಸನ್ (ಕಡಲೆಹಿಟ್ಟು) ಮತ್ತು ಹಳದಿ** : ಎರಡು ಚಮಚ ಕಡಲೆಹಿಟ್ಟು, ಅರ್ಧ ಚಮಚ, ಹಳದಿ, ಸ್ವಲ್ಪ ನೀರು ಅಥವಾ ಹಾಲು ಪೇಸ್ಟ್ ಮಾಡಿ ಮುಖಕ್ಕೆ ಹಚ್ಚಿ ಒಣಗಿದ ನಂತರ ಮೃದುವಾಗಿ ಅರೆದು ತೆಗೆದುಹಾಕಿ. ಇದು ಕೂದಲು ಮೂಡುವ ಬೇರುಗಳನ್ನು ದುರ್ಬಲಗೊಳಿಸುತ್ತದೆ.
- **ನಿಂಬೆಹಣ್ಣು ಮತ್ತು ಜೇನುತುಪ್ಪ** : ನಿಂಬೆ ರಸ ಮತ್ತು ಜೇನುತುಪ್ಪ ಸಮ ಪ್ರಮಾಣದಲ್ಲಿ ತೆಗೆದು ಮಿಶ್ರಣ ಮಾಡಿ. ಅದನ್ನು ಮುಖಕ್ಕೆ ಹಚ್ಚಿ 15–20 ನಿಮಿಷಗಳ ನಂತರ ಬೆಚ್ಚಗಿನ ನೀರಿನಿಂದ ತೊಳೆದುಕೊಳ್ಳಿ. ವಾರಕ್ಕೆ 2–3 ಬಾರಿ ಮಾಡಿದರೆ ಕೂದಲು ಬೆಳೆಯುವುದು ನಿಧಾನವಾಗುತ್ತದೆ.
- **ಪಪಾಯಿ ಮತ್ತು ಹಳದಿ ಮಿಶ್ರಣ** : ಕಚ್ಚಾ ಪಪಾಯಿ ತುಂಡುಗಳನ್ನು ಚೆನ್ನಾಗಿ ಮುದಿದು ಅದಕೆಕ ಸ್ವಲ್ಪ ಹಳದಿ ಸೇರಿಸಿ, ಈ ಮಿಶ್ರಣವನ್ನು ಮುಖಕ್ಕೆ ಹಚ್ಚಿ 15 ನಿಮಿಷಗಳ ನಂತರ ತೊಳೆದುಕೊಳ್ಳಿ. ಪಪಾಯದಲ್ಲಿರುವ ಎನ್ಜೈಮ್‌ಗಳು ಕೂದಲು ಬೇರುಗಳನ್ನು ದುರ್ಬಲಗೊಳಿಸುತ್ತದೆ.
- **ಓಟ್ಸ್ ಸ್ಕ್ರಬ್** : ಒಂದು ಚಮಚ ಓಟ್ಸ್, ಒಂದು ಚಮಚ ಜೇನುತುಪ್ಪ ಮತ್ತು ನಿಂಬೆ ರಸ ಹಾಕಿ ಮಿಶ್ರಣ ಮಾಡಿ. ಅದನ್ನು ಸ್ಕ್ರಬ್ ಮಾಡಿದಂತೆ ಮುಖಕ್ಕೆ ಹಚ್ಚಿ 10 ನಿಮಿಷ ಅರೆದು ತೊಳೆದುಕೊಳ್ಳಿ. ಇದು ಕೂದಲು ಬೇರುಗಳನ್ನು ಶಮಗೊಳಿಸಿ ಚರ್ಮವನ್ನು ಮೃದುವಾಗಿಸುತ್ತದೆ.

**ಗಮನಿಸಿ:** ಹಾರ್ಮೋನ್ ಅಸಮತೋಲನ (ಹೆಚ್ಚಿನ ಟೆಸ್ಟೋಸ್ಟೆರೋನ್) ಅಥವಾ ಪಿಸಿಓಡಿ ಮುಂತಾದ ಕಾರಣಗಳಿಂದ ಕೂಡ ಮುಖದ ಕೂದಲು ಹೆಚ್ಚಾಗಬಹುದು. ಅದಕ್ಕಾಗಿ ಒಂದು ಬಾರಿ ಆಯುರ್ವೇದ ವೈದ್ಯರನ್ನು ಸಂಪರ್ಕಿಸಿ ಒಳಗಿನ ಕಾರಣ ತಿಳಿದು ಚಿಕಿತ್ಸೆ ಪಡೆಯುವುದು ಉತ್ತಮ.

**ದಯಮಾಡಿ ಸದಸ್ಯರು 2025–26 ನೇ ಸಾಲಿನ ತಮ್ಮ ಸದಸ್ಯತ್ವ ಶುಲ್ಕವನ್ನು ಪಾವತಿ ಮಾಡಬೇಕಾಗಿ ವಿನಂತಿ.**

**– ರೊ. ಆರ್. ಆನಂದ್, ಅಧ್ಯಕ್ಷರು**

**ಬ್ಯಾಂಕ್ ಪಾವತಿ ವಿವರ:**

**ROTARY CLUB SHIMOGA**
**KARNATAKA BANK LTD.**
**Savalanga Road**
**Shimoga - 577 201**
**A/c No. : 7322500103371501**
**IFSC: KARB0000732**

*Scan QR Code to Pay*

## ಸಂಪಾದಕೀಯ

### ಜೋನ್ ಆಫ್ ಆರ್ಕ!



ಫ್ರಾನ್ಸ್ ಬ್ರಿಟೀಷರ ಆಳ್ವಿಕೆಗೆ ಸಿಲುಕಿ ನಲುಗಿ ಹೋಗಿದ್ದ ಕಾಲವದು. ಫ್ರಾನ್ಸ್‌ಗೆ ಹೆಸರಿಗೊಬ್ಬ ರಾಜನಿದ್ದರೂ ಅವನು ಆಂಗ್ಲರ ಅಡಿಯಾಳಾಗಿ ಕೆಲಸ ಮಾಡುತ್ತಿದ್ದನು. ಇಂತಹ ದಿನಗಳಲ್ಲಿ ಒಮ್ಮೆ ಫ್ರಾನ್ಸ್‌ನ ಬೀದಿಯಲ್ಲಿ ಮಲಗಿದ್ದ ಅನಾಥ ಬಾಲಕಿಯೊಬ್ಬಳಿಗೆ ಕನಸೊಂದು ಬಿದ್ದಿತು. ಆ ಕನಸಿನಲ್ಲಿ ಸಂತನೊಬ್ಬ ಕಾಣಿಸಿಕೊಂಡು ಫ್ರಾನ್ಸ್‌ನ್ನು ಬ್ರಿಟೀಷರಿಂದ ಮುಕ್ತಿಗೊಳಿಸುವಂತೆ ಬಾಲಕಿಗೆ ಆದೇಶವಿತ್ತರಂತೆ. ಆದರೆ ದೇಶಕ್ಕೆ ದೇಶವೇ ಮಹಾರಾಜನಿಂದ ಹಿಡಿದು ಎಲ್ಲರೂ ಬ್ರಿಟೀಷರ ಅಡಿಯಾಳಾಗಿರುವಾಗ ಕೇವಲ 13 ವರ್ಷ ವಯಸ್ಸಿನ ಆ ಹುಡುಗಿಯಿಂದ ಫ್ರಾನ್ಸ್ ಗೆ ಸ್ವಾತಂತ್ರ್ಯ ಕೊಡಿಸಲಾದೀತೆ.

ಆದರೆ ಆ ಬಾಲಕಿ ಧೃತಿಗೆಡದೆ ಸಂತವಾಣಿಯಿಂದ ಪ್ರಭಾವಿತಳಾಗಿ ನೇರವಾಗಿ ಫ್ರಾನ್ಸ್‌ನ ಸೇನಾ ಮುಖ್ಯಸ್ಥರನ್ನು ಕಂಡು ತನಗೆ ಬಿದ್ದ ಕನಸಿನ ಬಗ್ಗೆ ವಿವರಿಸಿ, ಬ್ರಿಟೀಷರ ವಿರುದ್ಧ ಹೋರಾಡುವಂತೆ ತಿಳಿಸಿದಳು. ಮೊದಮೊದಲು ಬಾಲಕಿಯ ಮಾತಿಗೆ ಫ್ರಾನ್ಸ್ ಸೈನಿಕರು ಹಾಸ್ಯ ಮಾಡಿದರು. ಆದರೆ ಪಟ್ಟು ಬಿಡದ ಬಾಲಕಿ ಸೈನಿಕರನ್ನು ಹುರಿದುಂಬಿಸಿದಳು. ಸೈನಿಕರಿಗೆ ಬಾಲಕಿಯ ಧೈರ್ಯ, ಕೆಚ್ಚೆದೆ ಮತ್ತು ಅವಳಿಗಿದ್ದ ರಾಷ್ಟ್ರಾಭಿಮಾನ ಮೆಚ್ಚುಗೆಯಾಯಿತು. ಬ್ರಿಟಿಷ್‌ರ ದಬ್ಬಾಳಿಕೆಗೆ ರೋಸಿಹೋಗಿದ್ದ ಅವರು ಬಾಲಕಿಯಿಂದ ಸ್ಫೂರ್ತಿ ಪಡೆದವರಂತೆ ದೊರೆಯ ಮಾತನ್ನು ಲೆಕ್ಕಿಸದೇ ಆಂಗ್ಲರ ವಿರುದ್ಧ ದಂಗೆ ಎದ್ದರು. ಫ್ರಾನ್ಸ್ ಕಲಿಗಳ ಕೆಚ್ಚೆದೆಯ ಹೋರಾಟಕ್ಕೆ ಬ್ರಿಟಿಷರು ಸೋತು ಫ್ರಾನ್ಸ್‌ನಿಂದ ಕಾಲ್ಕಿತ್ತರು. ಫ್ರಾನ್ಸ್ ಸ್ವತಂತ್ರವಾಯಿತು.

ಪ್ರೆಂಚ್ ಪ್ರಜೆಗಳು ಪುನಃ ತಮ್ಮ ರಾಜನನ್ನು ಸಿಂಹಾಸನವನ್ನೇರಿಸಿ ಪ್ರಜಾಡಳಿತ ನೆಲೆಸುವಂತೆ ಮಾಡಿದರು. ಆ ಪುಟಾಣಿ ಬಾಲಕಿಗಂತೂ ಎಲ್ಲೆಲ್ಲಿಯೂ ಗೌರವಾದರಗಳು ದೊರೆತವು. ಅನಾಥ ಬಾಲಕಿಯೊಬ್ಬಳು ದೇಶದ ಸ್ವಾತಂತ್ರಕ್ಕಾಗಿ ತೋರಿದ ಧೈರ್ಯ ಸಾಹಸವು ದೇಶಾದ್ಯಂತ ಮಾರ್ದನಿಸಿತು. ಹೋದಲ್ಲೆಲ್ಲಾ ಸನ್ಮಾನ ನೆರವೇರಿಸಿ ಪ್ರಜೆಗಳು ತಮ್ಮ ಧನ್ಯತೆಯನ್ನು ವ್ಯಕ್ತಪಡಿಸುತ್ತಿದ್ದರು.

ಫ್ರಾನ್ಸ್ ಬ್ರಿಟೀಷರಿಂದ ಮುಕ್ತಿ ಹೊಂದಿದ್ದರೂ ಸಹ ರಾಜನು ಇನ್ನೂ ಕೆಲವು ಆಂಗ್ಲ ಅಧಿಕಾರಿಗಳನ್ನು ಆಡಳಿತದ ಹಿತದೃಷ್ಟಿಗಾಗಿ ಇರಲೆಂದು ತನ್ನ ದೇಶದಲ್ಲಿಯೇ ಉಳಿಸಿಕೊಂಡಿದ್ದನು. ಬಾಲಕಿಯ ದೂರದೃಷ್ಟಿಯು ಅದ್ಭುತವಾಗಿದ್ದು ಅವಳು ರಾಜನನ್ನು ಭೇಟಿಯಾಗಿ ಉಳಿಸಿಕೊಂಡಿರುವ ಆಂಗ್ಲ ಅಧಿಕಾರಿಗಳನ್ನು ಅವರ ದೇಶಕ್ಕೆ ವಾಪಸ್ಸು ಕಳಿಸಿರೆಂದು ಬೇಡಿಕೊಂಡಳು. ಇದೇ ಸಂದರ್ಭದಲ್ಲಿ ಆ ಬಾಲಕಿಯ ಉನ್ನತಿಯನ್ನು ಸಹಿಸದ ಕೆಲವು ಕಿಡಿಗೇಡಿಗಳು ರಾಜನ ಬುದ್ಧಿಯನ್ನು ಕೆಡಿಸಿ ಬಾಲಕಿಯ ವಿರುದ್ಧ ಆರೋಪ ಹೊರಿಸಿ ಚಾಡಿ ಹೇಳುತ್ತಿದ್ದರು. ಅಲ್ಲದೇ ಆಂಗ್ಲ ಅಧಿಕಾರಿಗಳೂ ಸಹ ಇದೇ ಸಮಯವನ್ನು ಬಳಸಿಕೊಂಡು ಬಾಲಕಿಯನ್ನು ಕೊನೆಗಾಣಿಸಲು ನಿರ್ಧರಿಸಿ ರಾಜನ ತಲೆಕೆಡಿಸಿ ಬಾಲಕಿಯನ್ನು ಸೆರೆಹಿಡಿದು ಕೊಲ್ಲಿಸಲು ಆಜ್ಞೆ ಹೊರಡಿಸಿದರು.

ರಾಜಾಜ್ಞೆಯಂತೆ ಸೈನಿಕರು ಹದಿನೇಳು ವರ್ಷದ ಬಾಲಕಿಯನ್ನು ಸೆರೆಹಿಡಿದು ನೆಪಕ್ಕೆಂಬಂತೆ ವಿಚಾರಣೆ ನಡೆಸಿ ಬಜಾರಿನ ಪ್ರಮುಖ ಬೀದಿಯ ಕಂಬಕ್ಕೆ ಕಟ್ಟಿಹಾಕಿದರು. ಕಿಡಿಗೇಡಿಗಳು ಆ ಬಾಲಕಿಯನ್ನು ನಿಂದಿಸಿ ಮಾತನಾಡಿದರು. ದೇಶದ್ರೋಹಿ ಬಾಲಕಿ ಎಂದು ಹಣೆಪಟ್ಟಿಯನ್ನು ಹಾಕಲಾಗಿತ್ತು. ತನಗೆ ಇಷ್ಟೆಲ್ಲಾ ಆಗುತ್ತಿದ್ದರೂ ಆ ಬಾಲಕಿ ಹಸನ್ಮುಖಿಯಾಗಿದ್ದಳು ತಾನು ಮಾಡಿದ್ದೆಲ್ಲವೂ ರಾಷ್ಟದ ಹಿತಕ್ಕಾಗಿ ಎಂದಷ್ಟೇ ಹೇಳಿದಳು. ನಿಜವಾದ ರಾಷ್ಟ್ರಾಭಿಮಾನಿಗಳು ವೀರ ಬಾಲಕಿಗಾಗಿ ಕಣ್ಣೀರು ಸುರಿಸಿದರು. ಕಿಡಿಗೇಡಿಗಳು ಬಾಲಕಿಯನ್ನು ಕಲ್ಲಿನಿಂದ ಹೊಡೆದು ಸಾಯಿಸಿದರು.

ಆ ಬಾಲಕಿ ಮತ್ಯಾರೂ ಅಲ್ಲ. ಆಕೆ ಜೋನ್ ಆಫ್ ಆರ್ಕ! ಓದು ಬರಹ ಕಲಿಯದ ಅನಾಥೆ. ಆದರೆ ದೇಶದ ಸ್ವಾತಂತ್ರಕ್ಕಾಗಿ ಸೈನಿಕರನ್ನು ಹುರಿದುಂಬಿಸಿ ರಾಷ್ಟ್ರಪ್ರೇಮ ಮೆರೆದಳು. ತನ್ಮೂಲಕ ಪ್ರಪಂಚದಾದ್ಯಂತ ಪ್ರಸಿದ್ಧಿ ಪಡೆದಳು. ಬದುಕಿನ ಕೊನೆಯ ಘಳಿಗೆಯವರೆಗೂ ಫ್ರಾನ್ಸ್‌ಗೆ ಒಳಿತನ್ನೇ ಬಯಸಿದ ಆ ಬಾಲಕಿಯನ್ನು ಸಂತಳೆಂದು ಗೌರವಿಸಿ ಇಂದಿಗೂ ಯೂರೋಪಿನಾದ್ಯಂತ ಪ್ರತಿವರ್ಷ ಮೇ 30 ರಂದು ಪುಣ್ಯದಿನವನ್ನು ಆಚರಿಸಲಾಗುತ್ತಿದೆ. ಈ ಮೂಲಕ ಅವರು ಆಕೆಯ ರಾಷ್ಟ್ರಾಭಿಮಾನಕ್ಕೆ ಗೌರವ ನೀಡುತ್ತಿದ್ದಾರೆ. ಇದೊಂದು ಮನಃಪ್ರೇರಕ ಕಥೆಯೆಂದು ಇಲ್ಲಿ ಉಲ್ಲೇಖಿಸಲಾಗಿದೆ.

• ರೊ. ಎಂ. ಮಾಧವಾಚಾರ್

## ಜನ್ಮ ದಿನದ ಶುಭಾಶಯಗಳು




Sathynarayan B N
13th Nov



Manujnath A.
16th Nov




Gopalakrishna Gupta Y.
16th Nov



### ಮುದ್ದುರಾಮನ ಚೌಪದಿ...

ದುಃಖವಿದೆ ಎಂದಳುತ ತಪಿಸಿದರೆ ಬದುಕೇನು?
ಏನಿದೆಯೋ ಅದರೊಡನೆ ಸಮನಿಪುದೆ ಬದುಕು
ಹೂವಿರಲಿ ಮುಳ್ಳಿರಲಿ ಬೇಡವೆಂದರೆ ಹೇಗೆ?
ತಮಬೆಳಕು ಋತು ರೀತಿ – ಮುದ್ದುರಾಮ

NOV




### 5. Rotary Foundation Month

- Clubs and Districts draw the attention of Rotarians to contribute towards The Rotary Foundation [TRF].
- Give Rotary information to the members about the grants, funds and recognitions.
- Promote contribution towards Paul Harris Fellows.

## ಚತುರ್ವಿಧ ಪರೀಕ್ಷೆ

ನಮ್ಮ ಚಿಂತನೆ, ಆಡುವ ಮಾತು ಅಥವಾ ಕೃತಿಗಳಲ್ಲಿ

01 ಇದು ಸತ್ಯವೇ?

02 ಇದು ಸಂಬಂಧಪಟ್ಟ ಎಲ್ಲರಿಗೆ ನ್ಯಾಯ ಸಮ್ಮತವೇ?

03 ಇದು ಸದ್ಭಾವನೆ ಮತ್ತು ಉತ್ತಮ ಸ್ನೇಹ ಸಂಬಂಧವನ್ನು ಬೆಳೆಸಬಲ್ಲದೇ?

04 ಇದು ಸಂಬಂಧಪಟ್ಟ ಎಲ್ಲರಿಗೆ ಪ್ರಯೋಜನಕಾರಿಯೇ?

To,

*Book Post*

ಮುದ್ರಣ: ರಾಯಲ್ ಪ್ರಿಂಟರ್ಸ್, ಶಿವಮೊಗ್ಗ, 98862 73495